14 ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯು ಒದಗಿಸಿರುವ ಸೌಲಭ್ಯಗಳ ಬಗ್ಗೆ

ಶ್ರೀಮತಿ ಟಿ ಭಾಗೀರಥಿ (ಕೊಟ್ಟೂರು) ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ಪ್ರಶ್ನೆ ಸಂಖ್ಯೆ 862 ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂಲ ಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯು ಬಹಳಷ್ಟು ಯೋಜನೆ ಸೌಲಭ್ಯಗಳನ್ನು ಒದಗಿಸಿದೆ ಅವುಗಳು ಈ ರೀತಿ ಇವೆ ಗುಲ್ಬರ್ಗಾ ವಿಮಾನ ನಿಲ್ದಾಣ ಅಭಿವೃದ್ಧಿ ಹಂಪಿ ಹತ್ತಿರ ವಿಮಾನ ನಿಲ್ದಾಣ ಅಭಿವೃದ್ಧಿ ಕೊಟ್ಟೂರು ಹರಿಹರ ಹೊಸ ರೈಲ್ವೆ ಹಿಂದಿನ ಎರಡು ವರ್ಷಗಳಲ್ಲಿ ಈ ಯೋಜನೆ ಅತ್ಯಂತ ಶೀಘ್ರವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿತ್ತು ಅನೇಕ ಕಷ್ಟಗಳ ನಡುವೆ ಇವತ್ತು ಭೂ ಸ್ವಾಧೀನ ಮಾಡಿಕೊಳ್ಳಬೇಕಾಗಿತ್ತು ಅಂತಹ ಸಂದರ್ಭದಲ್ಲಿ ಅನೇಕ ರೈತರು ಅಡೆತಡೆಗಳನ್ನು ಮಾಡಿದ್ದಾಗ್ಯೂ ಕೂಡ ನಾನು ಆ ರೈತರನ್ನೆಲ್ಲಾ ಕೂಡಿಸಿಕೊಂಡು, ಇಲ್ಲ ದಯವಿಟ್ಟು ಇದಕ್ಕೆ ಯಾರೂ ಅಡ್ಡಿ ಮಾಡಬೇಡಿ ಅತಿ ಶೀಘ್ರವಾಗಿ ಕೆಲಸವನ್ನು ಮಾಡೋಣ ಎನ್ನತಕ್ಕ ವಿಚಾರವನ್ನು ಹೇಳಿದ್ದರಿಂದ ಇವತ್ತಿನವರೆಗೆ ಯಾವುದೇ ರೀತಿ ಅಡೆ ತಡೆ ಇಲ್ಲದೇ ಕಾರ್ಯಕ್ರಮ ಸಾಗುತ್ತಿದೆ ಆದರೆ ಈ ವರ್ಷ ಕೊಟ್ಟೂರು–ಹರಿಹರ ಹೊಸ ರೈಲ್ವೆಗೆ ಕೇವಲ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕದ್ದು ಅದರಲ್ಲಿ ಕೇವಲ ನನ್ನ ರೈಲ್ವೆ ಯೋಜನೆಗೆ 30 ಲಕ್ಷ ರೂಪಾಯಿಗಳು ಮಾತ್ರ ಸಿಗುತ್ತಿದೆ 121 ಕೋಟಿ ರೂಪಾಯಿ ಪ್ರಾಜೆಕ್ಟ್ ಕಾರ್ಯಕ್ರಮ ಯಾವಾಗ ಮುಗಿಯಬೇಕು ಎನ್ನತಕ್ಕದ್ದು ನನಗೆ ಈಗ ಚಿಂತನೆ ಆಗಿದೆ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮಂತ್ರಿಗಳೂ ಹಣಕಾಸು ಸಚಿವರು ಇಲ್ಲೇ ಇದ್ದಾರೆ ಈ ರೈಲ್ವೆ ಯೋಜನೆಗೆ ಹೆಚ್ಚು ಹಣವನ್ನು ಕೊಟ್ಟು ಅತೀ ಶೀಘ್ರದಲ್ಲಿ ಕಾರ್ಯಕ್ರಮವನ್ನು ಮುಗಿಸಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸನ್ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಆ ರೈಲ್ವೆ ಯೋಜನೆ ಇದೆಯಲ್ಲಾ, ಅದನ್ನು ಪರಿಶೀಲನೆ ಮಾಡಿ ಸರ್ಕಾರದಿಂದ ಎಷ್ಟು ಹಣ ಕೊಡಬೇಕು ಅದನ್ನು ನೋಡಿ ಆ ಹಣ ಒದಗಿಸತಕ್ಕಂಥ ಪ್ರಯತ್ನ ಮಾಡುತ್ತೇವೆ

ಶ್ರೀ ಸಿ ಸಿ ಪಾಟೀಲ್ ಸನ್ಮಾನ್ಯ ಅಧ್ಯಕ್ಷರೆ, ಸಿ ಸಿ ಪಾಟೀಲ್ ಮತ್ತು ಬಿ ಸಿ ಪಾಟೀಲ್ ಎಂಬ ಹೆಸರು ಸ್ವಲ್ಪ ಕನ್‌ಫ್ಯೂಸ್ ಆಗಿದೆ.

15 ವಿಷಯ ನರಗುಂದ ವಿಧಾನಸಭಾ ಕ್ಷೇತ್ರದ ರೋಣ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕಾಡು ದನಗಳ ಹಾವಳಿ

ಶ್ರೀ ಸಿ ಸಿ ಪಾಟೀಲ್ (ನರಗುಂದ) ಮಾನ್ಯ ಅಧ್ಯಕ್ಷರೆ, ನರಗುಂದ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ರೋಣ ಹಳ್ಳಿಗಳಲ್ಲಿ ಅಸುಟಿ ಕರ್ಮಡಿ,

ಮಲ್ಲಾಪುರ ಯಾವಗಲ್, ಕೆಲವೊಂದು ಹಳ್ಳಿಗಳಲ್ಲಿ ಕಾಡು ದನಗಳ ಹಾವಳಿ ವಿಪರೀತ ಆಗಿದೆ ಸುಮಾರು ಮೂರು ವರ್ಷದ ಬರಗಾಲದ ನಂತರ ಈ ವರ್ಷ ಅಲ್ಪಸ್ವಲ್ಪ ಮಳೆ ಆಗಿ ರೈತ ಸಮುದಾಯ ಬೆಳೆದಂತಹ ಬೆಳೆಯನ್ನು ಆ ಕಾಡು ದನಗಳು ತಿಂದು ಹಾಳು ಮಾಡುತ್ತಿವೆ ಸುಮಾರು 100 ರಿಂದ 150 ದನಗಳು ಇರತಕ್ಕಂಥ ಹಿಂಡಿನಲ್ಲಿ ಅವುಗಳನ್ನು ಹಿಡಿಯುವುದಕ್ಕೆ ಹೋದರೆ ಅವು ಪ್ರತಿಯಾಗಿ ದಾಳಿಯನ್ನು ಮಾಡುವುದಕ್ಕೆ ಬರುತ್ತಿವೆ ಜನ ಭೀತಿಯಿಂದ ಹಲವಾರು ಸಮಯಗಳಲ್ಲಿ ಗಿಡವನ್ನು ಹತ್ತಿ ಸಾಯಂಕಾಲದವರೆಗೆ ಗಿಡದ ಮೇಲೆ ಕುಳಿತು ತಿರುಗಿ ತಮ್ಮ ಮನೆಗೆ ಬಂದಿದ್ದಾರೆ ಈ ವಿಷಯವಾಗಿ ಅಸುಟಿ ಗ್ರಾಮ ಪಂಚಾಯತಿ ಮತ್ತು ಕರ್ಮಡಿ ಗ್ರಾಮ ಪಂಚಾಯತಿಯ ಜನ ಹಾಗೂ ಸದಸ್ಯರು ಮತ್ತು ಛೇರ್ಮನ್‌ರವರು ಸಂಬಂಧಿಸಿದ ಅಧಿಕಾರಿಗಳ ಹತ್ತಿರ ಹೋದರೆ, ತಹಶೀಲ್ದಾರ್ ಸಾಹೇಬರ ಹತ್ತಿರ ಹೋದರೆ ಅವರು ಎಕ್ಸಿಕ್ಯೂಟಿವ್ ಆಫೀಸರ್ ಹತ್ತಿರ ಹೋಗಿ ಎನ್ನುತ್ತಾರೆ ಎಕ್ಸಿಕ್ಯೂಟಿವ್ ಆಫೀಸರ್ ಹತ್ತಿರ ಹೋದರೆ ಜಿಲ್ಲಾಧಿಕಾರಿಗಳ ಹತ್ತಿರ ಹೋಗು ಎನ್ನುತ್ತಾರೆ ಜಿಲ್ಲಾಧಿಕಾರಿಗಳ ಹತ್ತಿರ ಹೋದರೆ ಫಾರೆಸ್ಟ್ ಇಲಾಖೆಗೆ ಹೋಗಿ ಎನ್ನುತ್ತಾರೆ ನಾವು ಫಾರೆಸ್ಟ್ ಇಲಾಖೆಗೆ ಹೋಗಿ ಕೇಳಿದಾಗ, ಈ ಕಾಡು ದನಗಳು ವೈಲ್ಡ್ ಅನಿಮಲ್ಸ್‌ನಲ್ಲಿ ಬರುವುದಿಲ್ಲ ಅವುಗಳನ್ನು ಹಿಡಿಯುವುದಕ್ಕೆ ನಮಗೆ ಏನೂ ಆಗುವುದಿಲ್ಲ ಎನ್ನುವಂತಹ ಅಸಹಾಯಕತೆ ಮಾತನ್ನು ತೋಡಿಕೊಳ್ಳುತ್ತಾರೆ

ಈಗಾಗಲೇ ಸಾವಿರಾರು ಎಕರೆಗಳನ್ನು ಆ ದನಗಳು ಹಾಳು ಮಾಡಿವೆ ಈಗ ಮುಂಗಾರು ಮುಗಿದು ಹಿಂಗಾರು ಬಿತ್ತನೆಯ ಸಮಯ ಪ್ರಾರಂಭವಾಗುತ್ತಿದೆ ಈಗಾಗಲೇ 1000–1500 ಎಕರೆಗಳನ್ನು ಹಾಳು ಮಾಡಿದಂತಹ ದನಗಳನ್ನು ಹಿಡಿಯಲು ಸರ್ಕಾರದ ವ್ಯವಸ್ಥೆಯಲ್ಲಿ ಏನಾದರೂ ಕ್ರಮಗಳಿವೆಯೇ? ಅವುಗಳನ್ನು ಹಿಡಿಯಲಿಕ್ಕೆ ಸರ್ಕಾರದ ಯಾವುದಾದರೂ ಒಂದು ಇಲಾಖೆಯಿಂದ ಸಾಧ್ಯ ಇದೆಯೆ ಎಂಬುದನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅವರ ಗಮನವನ್ನು ಸೆಳೆದು ಆ ಭಾಗದ ರೈತರಿಗೆ ನೆರವಾಗಲಿಕ್ಕೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತಿದ್ದೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಇದು ನಿಜವಾಗಿಯೂ ಕೂಡ ಬಹಳ ಗಹನವಾದಂತಹ ವಿಷಯ ಅಲ್ಲಿ ಕಾಡು ಪ್ರಾಣಿಗಳು ರೈತರು ಬೆಳೆದಂತಹ ಬೆಳೆಗಳ ಮೇಲೆ ಹೋಗಿ ಬಿದ್ದು ಹಾಳು ಮಾಡುತ್ತಿವೆ ನಾನು ಬಹಳ ಹಿಂದೆ ನೋಡಿದ್ದೇನೆ ಸಂಗಮದ ಹತ್ತಿರ ಮೇಕೆದಾಟ ಬಳಿ ಸುಮಾರು 35 ವರ್ಷಗಳ ಹಿಂದೆ ನಾನು ಅಲ್ಲಿಗೆ ಹೋಗಿದ್ದೆ ಅಲ್ಲಿ ತೆಂಗಿನ ಗಿಡಗಳನ್ನು ಹಾಕಿದ್ದರು ಆನೆಗಳು ಬರುತ್ತವೆಂದು ಅಲ್ಲಿ ಒಂದು ಮೈಕ್ ಹಾಕಿ ಶಬ್ದ ಮಾಡುವಂತಹ ವ್ಯವಸ್ಥೆ ಮಾಡಿದ್ದರು ಈ ತರಹ ಸರ್ಕಾರದಿಂದ ಪ್ರಾಣಿಗಳನ್ನು ಹಿಡಿಯುವುದಕ್ಕೆ ಆಗುವುದಿಲ್ಲ ಆ ತರಹ ಏನಾದರೂ ಒಂದು ವ್ಯವಸ್ಥೆಯಾಗ

ಮಾಡಬೇಕು ಆದರೂ ಕೂಡ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ ಅದನ್ನು ಯಾವ ತರಹ ಕಂಟ್ರೋಲ್ ಮಾಡಬೇಕೋ, ಆ ರೀತಿ ಕಂಟ್ರೋಲ್ ಮಾಡುವಂತಹ ಕೆಲಸಕ್ಕೆ ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆಂದು ತಮ್ಮ ಮೂಲಕ ಅವರಿಗೆ ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ಸಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೆ, ಅರಣ್ಯ ಇಲಾಖೆಯ ಮೂಲಕ ಅವುಗಳನ್ನು ಹಿಡಿದು ಅಡವಿಗೆ ವರ್ಗಾಯಿಸಲಿಕ್ಕೆ ಸಾಧ್ಯವಾಗುತ್ತದೆಯೇ? ಈ ದಿಸೆಯಲ್ಲಿ ಮಾನ್ಯ ಕೃಷಿ ಸಚಿವರು ಅಥವಾ ಸರ್ಕಾರದವರು ತೀವ್ರವಾಗಿ ಗಮನವನ್ನು ಹರಿಸಬೇಕು

ಅಧ್ಯಕ್ಷರು ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೂ ಮತ್ತೆ ನಿಮ್ಮದೇನ್ರಿ? ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಸಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೆ, ಅಲ್ಲಿ ಸಾವಿರಾರು ಎಕರೆಗಳು ಹಾಳಾಗಿದೆ ಮೂರು ವರ್ಷದ ಬರಗಾಲದ ನಂತರ ಸ್ವಲ್ಪ ಬೀಜ ಬಿತ್ತಿದ್ದೇವೆ ಅದು ಹಾಳಾಗಿದೆ ಆದುದರಿಂದ ನಾನು ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ ಅದಕ್ಕೆ ಉತ್ತರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ

ಅಧ್ಯಕ್ಷರು ಅದಕ್ಕೆ ಸರ್ಕಾರದವರು ಈಗಾಗಲೇ ಉತ್ತರ ಹೇಳಿದ್ದಾರೆ ತಾವು ದಯವಿಟ್ಟು ಕುಳಿತುಕೊಳ್ಳಿ ಈಗ ಅಂಗಾರರವರು ತಮ್ಮ ವಿಷಯ ಪ್ರಸ್ತಾಪಿಸಬೇಕು

16 ವಿಷಯ ಸುಳ್ಯ ಕ್ಷೇತ್ರದಲ್ಲಿ ಚಲಾವಣೆ ಆಗುತ್ತಿರುವ ಖೋಟಾ ನೋಟು ಪ್ರಕರಣದ ಬಗ್ಗೆ

ಶ್ರೀ ಎಸ್ ಅಂಗಾರ (ಸುಳ್ಯ) ಮಾನ್ಯ ಅಧ್ಯಕ್ಷರೆ, ನನ್ನ ಸುಳ್ಯ ಕ್ಷೇತ್ರದಲ್ಲಿ 1998 ಮೇ ತಿಂಗಳಿನಲ್ಲಿ ಸುಳ್ಯ ತಾಲ್ಲೂಕಿನ ಬೆಳ್ಳಾರಿಯ ಅಯ್ಯನ ಕಟ್ಟೆಯಲ್ಲಿ ಮೊಯಿನುದ್ದೀನ್ ಕುಂಜ್ಞಯವರ ಮನೆಯಲ್ಲಿ ಜೆರಾಕ್ಸ್ ಮೆಶಿನ್ ಸಿಕ್ಕಿ ಖೋಟಾ ನೋಟು ಪ್ರಕರಣವೊಂದು ಪತ್ತೆಯಾಯಿತು ಆ ಒಂದು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಕೇರಳದ ಕಲ್ಲಿಕೋಟೆಯಲ್ಲಿ ಪ್ರಿಂಟಿಂಗ್ ಮೆಶಿನ್ ಕೂಡ ಪತ್ತೆ ಹಚ್ಚಿದ್ದಾರೆ ಸಂಬಂಧಪಟ್ಟಂತಹ ಪೊಲೀಸ್ ಅಧಿಕಾರಿಗಳು ಆ ಪ್ರಿಂಟಿಂಗ್ ಮೆಶಿನ್ ಅನ್ನು seize ಮಾಡುವಂತಹ ಕೆಲಸವನ್ನು ಮಾಡಿದ್ದಾರೆ ಆದರೆ ಅದರ ನಂತರ ತಾಲ್ಲೂಕಿನ ಬೇರೆ ಬೇರೆ ಕಡೆಗಳಿಂದ, ಕೇರಳದಿಂದ ಬರುವಂತಹ ಅನೇಕ ಜನರು ಬಂದು, ಬೇರೆ ಬೇರೆ ಕಾಲೋನಿಗಳಿಗೆ ಹೋಗಿ ದುಡ್ಡನ್ನು ಬಡ್ಡಿಗೆ ಕೊಡುವಂತಹ ಕೆಲಸ ನಡೆಯುತ್ತಿದೆ ಈ ರೀತಿಯಲ್ಲಿ ಕಳೆದ 4–5 ವರ್ಷಗಳಿಂದ ನಡೆಯುತ್ತಿದೆ ಮೊನ್ನೆ ಅಂದರೆ 23 7ಕ್ಕೆ ಗುತ್ತಿಗಾರ್‌ನಲ್ಲಿ ಕೂಡ ಈ ರೀತಿಯ ಒಂದು ಖೋಟಾ ನೋಟು ಪ್ರಕರಣ ಬೆಳಕಿಗೆ ಬಂದಿದೆ ಸಂಬಂಧಪಟ್ಟಂತಹ ಸುಮಾರು 7–8